ದಿನಾಂಕಃ 06-09-2022 ರಂದು ಪ್ರಮಾಣ ವಚನ ಭೋದಿಸಲಾಯಿತುಃ

**ಮುಂದುವರಿದ ಪಾಟೀ ಸವಾಲು 1, 4 ರಿಂದ 6ನೇ ಪ್ರತಿವಾದಿ ಪರ ವಕೀಲರಿಂದ ಃ**

ನನ್ನ ತಂದೆಯ ಹೆಸರು ಕಿಟ್ಟಪ್ಪ ಅಲಿಯಾಸ್ ಕೃಷ್ಣಪ್ಪ ಎಂದರೆ ಹೌದು. ನನ್ನ ಮುತ್ತಾತ ವಾಲೇಕರ್ ವೆಂಕಟಪತಿ ಎಂದರೆ ಹೌದು. ನನ್ನ ಮುತ್ತಾತ ಮೂಲತಃ ಸಂತೇಹಳ್ಳಿ ಗ್ರಾಮದವರು ಎಂದರೆ ಹೌದು. ನನ್ನ ಮುತ್ತಾತನಿಗೆ ಮುನಗೂರಪ್ಪ ಎಂಬ ಮಗನಿದ್ದ ಎಂದರೆ ಹೌದು. ಮುನಗೂರಪ್ಪನು ಅಕ್ಕಯ್ಯಮ್ಮಳನ್ನು ಮದುವೆಯಾದರು ಎಂದರೆ ಸರಿ, ಇವರಿಗೆ 3 ಜನ ಮಕ್ಕಳು- ವೆಂಕಟಸ್ವಾಮಿ ಜಿ. ಎಸ್. , ಕೃಷ್ಣಪ್ಪ(ನನ್ನ ತಂದೆ) ಹಾಗೂ ರಾಮಚಂದ್ರಪ್ಪ. ಮುನಿವೆಂಕಟಮ್ಮ ಮುನಗೂರಪ್ಪನಿಗೆ ಸೊಸೆಯಾಗಬೇಕು. ಮುನಗೂರಪ್ಪನಿಗೆ ಮುನಿವೆಂಕಟಮ್ಮ ಎಂಬ ಮಗಳಿದ್ದಳು ಎಂದರೆ ಸರಿಯಲ್ಲ, ಸದರಿ ಮುನಿವೆಂಕಟಮ್ಮಳನ್ನು ದೊಡ್ಡಗುರಪ್ಪನಿಗೆ ಮದುವೆ ಮಾಡಿಕೊಟ್ಟರು ಎಂದರೆ ಸರಿಯಲ್ಲ. ಸದರಿ ಮುನಿವೆಂಕಟಮ್ಮನಿಗೆ ಇಬ್ಬರು ಮಕ್ಕಳು ಅವರೆಂದರೆ- ಪೂಜಪ್ಪ ಮತ್ತು ಮುನಿಶಾಮಪ್ಪ ಎಂದರೆ ಹೌದು.

ಪೂಜಪ್ಪನ ಹೆಂಡತಿ ಗಂಗಮ್ಮ ಎಂದರೆ ಹೌದು. ಮುನಿಶಾಮಪ್ಪನ ಹೆಂಡತಿ ಬೈಯಮ್ಮ ಎಂದರೆ ಹೌದು. ನನ್ನ ತಾಯಿಯ ಹೆಸರು ಜಯಮ್ಮ. ನನ್ನ ತಾಯಿಯ ತಾಯಿ ಬೈಯಮ್ಮ. ಬೈಯಮ್ಮನ ತವರು ಮನೆ ಕೆ. ಆರ್. ಪುರಂ ಹೋಬಳಿ, ಕಲ್ಕೆರೆ ಗ್ರಾಮ ಎಂದರೆ ಹೌದು. ಮುನಿಶಾಮಪ್ಪ ಹಾಗೂ ಬೈಯಮ್ಮನಿಗೆ ಗಂಡು ಸಂತತಿ ಇಲ್ಲ ಎಂದರೆ ಹೌದು. 1ನೇ ಮಗಳು-

ಮುನಿವೆಂಕಟಮ್ಮ 1ನೇ ಪ್ರತಿವಾದಿ, 2ನೇ ಮಗಳು ಮುನಿಯಮ್ಮ – 2ನೇ ಪ್ರತಿವಾದಿ, 3ನೇ ಮಗಳು ಜಯಮ್ಮ -ಈ ಕೇಸಿನ ವಾದಿ (ನನ್ನ ತಾಯಿ) ಎಂದರೆ ಹೌದು, 4ನೇ ಮಗಳು ರತ್ನಮ್ಮ ನನ್ನ ಚಿಕ್ಕಮ್ಮ-3ನೇ ಪ್ರತಿವಾದಿ ಎಂದರೆ ಹೌದು.

ಪೂಜಪ್ಪ ಹಾಗೂ ಗಂಗಮ್ಮ ಅವರಿಗೆ 2 ಗಂಡು ಹಾಗೂ 2 ಹೆಣ್ಣು ಮಕ್ಕಳು ಎಂದರೆ ಹೌದು. ಮೊದಲನೇಯವರು ಮುನಿವೆಂಕಟಮ್ಮ ಎಂದರೆ ಹೌದು. ಸದರಿ ಮುನಿವೆಂಕಟಮ್ಮ ಮೃತಪಟ್ಟಿರುತ್ತಾರೆ ಎಂದರೆ ಹೌದು. ಅವರು ಮೃತಪಟ್ಟು 10-15 ವರುಷ ಆಗಿದೆ. ಆಕೆಗೆ ಒಬ್ಬನೇ ಮಗ, ಈ ಕೇಸಿನ 7ನೇ ಪ್ರತಿವಾದಿ ಎಂದರೆ ಹೌದು, ಸಾಕ್ಷಿ ಸ್ವತಃ ಅವರಿಗೆ ಒಬ್ಬ ಮಗಳು ಇದ್ದು, ಅವರು ಮೃತಪಟ್ಟಿರುತ್ತಾರೆ. ಅವರ ಹೆಸರು ಪೂಜಮ್ಮ, ಅವರು ಚಿಕ್ಕವಯಸ್ಸಿನಲ್ಲಿಯೇ ಮೃತಪಟ್ಟಿರುತ್ತಾರೆ, ಮದುವೆಯಾಗಿಲ್ಲ. ಪೂಜಪ್ಪ ಮತ್ತು ಗಂಗಮ್ಮನಿಗೆ 2ನೇ ಮಗು ಮುನಿಯಮ್ಮ-ಈ ಕೇಸಿನಲ್ಲಿ 8ನೇ ಪ್ರತಿವಾದಿ ಎಂದರೆ ಹೌದು. ಪೂಜಪ್ಪ ಮತ್ತು ಗಂಗಮ್ಮನ 3ನೇ ಮತ್ತು 4ನೇ ಮಕ್ಕಳಾದ ನಾರಾಯಣಪ್ಪ ಹಾಗೂ ಕೃಷ್ಣಪ್ಪ ಈ ಕೇಸಿನ 4ನೇ ಮತ್ತು 5ನೇ ಪ್ರತಿವಾದಿ ಎಂದರೆ ಹೌದು. 6ನೇ ಪ್ರತಿವಾದಿ ನೀಲಮ್ಮ- ಈಕೆ 4ನೇ ಪ್ರತಿವಾದಿ ನಾರಾಯಣಪ್ಪನ ಹೆಂಡತಿ ಎಂದರೆ ಹೌದು.

ನನ್ನ ತಾಯಿಯ ಅಕ್ಕ-ಮುನಿವೆಂಕಟಮ್ಮ ಎಂದರೆ ಹೌದು. ಸದರಿ ಮುನಿವೆಂಕಟಮ್ಮನಿಗೆ ಗಂಡು ಸಂತತಿ ಇಲ್ಲ ಎಂದರೆ ಹೌದು, 3 ಜನ ಹೆಣ್ಣು ಮಕ್ಕಳು ಎಂದರೆ ಹೌದು, ಅವರೆಂದರೆ-ಲಕ್ಷಮ್ಮ, ಶಾರದಮ್ಮ ಹಾಗೂ

ಸರಸ್ವತಮ್ಮ ಎಂದರೆ ಹೌದು. ಸದರಿ ಲಕ್ಷ್ಮಮ್ಮನನ್ನು 5ನೇ ಪ್ರತಿವಾದಿ ಕೃಷ್ಣಪ್ಪನಿಗೆ ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ಹೌದು.

ಈ ಕೇಸಿನ ಸಂಪೂರ್ಣ ಮಾಹಿತಿ ಇದೆ ಎಂದರೆ ಹೌದು. ಈ ಕೇಸಿಗೆ ಮಾಹಿತಿಯನ್ನು ನಾನು ಹಾಗೂ ನನ್ನ ತಾಯಿ ಇಬ್ಬರೂ ಕೊಟ್ಟಿರುತ್ತೇವೆ. 4ನೇ ಮತ್ತು 5ನೇ ಪ್ರತಿವಾದಿ ಏನು ರಿಟರ್ನ್ ಸ್ಟೇಟ್‌ಮೆಂಟ್ ಅನ್ನು ಹಾಕಿರುತ್ತಾರೆ ಎಂದು ತಿಳಿದುಕೊಂಡಿರುತ್ತೀರಾ? ಎಂದರೆ ಇಲ್ಲ.

**<u>ಮುಂದುವರಿದ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಗಿದೆಃ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)**

ಓ.ಹೇ ಕೇ ಸರಿ ಇದೆ.

**(ಲತಾದೇವಿ ಜಿ.ಎ)**
ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಲೂರು.